## ‘ಥಟ್ ಅಂತ..’ ಜಿಲ್ಲಾವಾರು ನಡೆಸಲಿ

ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮ ದಿ. 04.01.2002 ರಿಂದ ಪ್ರಾರಂಭವಾಗಿದ್ದು 3020ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತ ಬಂದಿದೆ. ಇದು ಹೀಗೇ ನಿರಂತರವಾಗಿ ನಡೆಯಲಿ. ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ, ವಿಜಯಪುರ, ಬಾಗಲಕೋಟೆ, ಧಾರಾವಾಡ, ಬೆಳಗಾವಿ, ಗದಗಗಳಲ್ಲಿ ‘ಥಟ್ ಅಂತ ಹೇಳಿ’ ನಡೆಸಬಹುದೇ? ಚಂದನ ವಾಹಿನಿಯವರು ಈ ಬಗ್ಗೆ ಗಮನ ಹರಿಸಲಿ.

—ಬಿ.ಎನ್.ಸೋಲ್ಲಾಪುರೆ, ಕಮಲ್‌ನಗರ್, ಬೀದರ

## ಹಳೆಯ ಚಿತ್ರಗಳ ಪ್ರಸಾರ

ನ.21 ರಂದು ರಾತ್ರಿ 11 ಗಂಟೆಗೆ ಉದಯ ವಾಹಿನಿಯಲ್ಲಿ ಪ್ರಸಾರವಾದ 1971ರ ಕಪ್ಪು ಬಿಳುಪು ಜಮಾನಾದ ಚಿತ್ರ ‘ಕಲ್ಯಾಣಿ’ ಮನಸ್ಸಿಗೆ ಮುದ ನೀಡಿತು. ವಿಜಯ ಭಾಸ್ಕರರ ಸುಶ್ರಾವ್ಯ ಸಂಗೀತ, ಜಯಂತಿ, ಗಂಗಾಧರ, ಅಶ್ವತ್ಥರ ಮನೋಜ್ಞ ಅಭಿನಯ, ಗಾಯಕಿ ಬಿ.ಕೆ. ಸುಮಿತ್ರಾರ ಸುಮಧುರ ಹಾಡು ‘ವೀಣಾ ನಿನಗೇಕೊ ಕಂಪನ’ ಹಿತವಾದ ಅನುಭವ ನೀಡಿದವು. ಕನ್ನಡದಲ್ಲಿ ಕಪ್ಪು ಬಿಳುಪು ಜಮಾನಾದ ಚಿತ್ರಗಳ ದೊಡ್ಡ ಖಜಾನೆಯೇ ಇದೆ. ಕಾದಂಬರಿ ಆಧಾರಿತ ಸರ್ವಮಂಗಳಾ, ಉಯ್ಯಾಲೆ, ಬೆಳ್ಳಿಮೋಡ, ಭಕ್ತಿಪ್ರಧಾನ ಮಹಾತ್ಮಾ ಕಬೀರ್, ನವಕೋಟಿ ನಾರಾಯಣ, ಸಂತ ತುಕಾರಾಂ, ಚಂದವಳ್ಳಿಯ ತೋಟ, ಪುನರ್ಜನ್ಮ... ನಿರ್ದೇಶಕರ, ನಾಯಕ ನಾಯಕರಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ವಿಂಗಡಣೆ ಮಾಡಿ ಎಲ್ಲ ವಾಹಿನಿಗಳಲ್ಲೂ ಸ್ಮರಣಾತ್ಮಕ ಭಾವನೆಯಿಂದ ಪ್ರಸಾರವಾಗಬೇಕು. 50, 60, 70ರ ದಶಕದ ಚಿತ್ರಗಳಿಗೆ ಹೆಚ್ಚಿನ ಪ್ರಧಾನ್ಯತೆ ಕೊಡಬೇಕು. ಆದರೆ ರಾತ್ರಿ 11 ಗಂಟೆಯ ಒಳಗೇ ಪ್ರಸಾರವಿರಲಿ.

—ಮುಕುಂದ ಹೆರಕಲ್ಲ, ಕಲಬುರಗಿ

ವಾರದ ಪತ್ರ

## ನಗುವುದೋ.. ಅಳುವುದೋ..!

ಮೌಢ್ಯವನ್ನೂ ಅಜ್ಞಾನವನ್ನೂ ಏಕಪ್ರಕಾರವಾಗಿ ಬಿತ್ತರಿಸುತ್ತಿರುವ ಧಾರಾವಾಹಿಗಳ ಸತತ ವೀಕ್ಷಣೆಯ ಪ್ರಭಾವದಿಂದ ತಿಳಿವಳಿಕೆಯ ಮೇಲೆ ಮುಸುಕುವ ಧೂಳನ್ನು ಒರೆಸುವ ಒಂದು ಸಣ್ಣ ಪ್ರಯತ್ನ ಇದು.

1. ಎಲ್ಲೋ ಹೊಳೆಗೆ ಹಾರಿದ ಚಿಕ್ಕ ಹುಡುಗಿಯೊಬ್ಬಳು ತೇಲಿಕೊಂಡೋ ಮುಳುಗಿಕೊಂಡೋ ಬಂದು ಇನ್ನೆಲ್ಲೋ ಮೇಲೆದ್ದು ಬದುಕಿ ಬರುವುದು ಅಸಂಭವ ದೇವಾಲಯದ ಮುಂದೆ ನಿಂತು ಪ್ರಾರ್ಥಿಸಿದ್ದರೂ ಸಹ.

2. ಹೊಳೆಯಲ್ಲಿ ಮುಳುಗಿ ನೀರು ಕುಡಿದಿದ್ದರೆ ಅಂಗಾತ ಮಲಗಿಸಿ ನೀರನ್ನು ಕಕ್ಕಿಸುವ ಪ್ರಯತ್ನ ಮಾಡಬಾರದು. ಅವರನ್ನು ಹೊಟ್ಟೆಯ ಮೇಲೆ ಮಲಗಿಸಬೇಕು.

3. ಗರ್ಭಪಾತವಾದ ಮಹಿಳೆಯೊಬ್ಬಳು ಸೀದಾ ಎದ್ದು ರಸ್ತೆಯ ಮೇಲೆ ಆರಾಮಾಗಿ ಹೋಗಲು ಸಾಧ್ಯವಿಲ್ಲ. ಅವಳು ಅದರ ಕುರುಹೇ ಸಿಗದಷ್ಟು ಗೆಲುವಿನಿಂದ ಇದ್ದು ಭಾಷಣ ಹೊಡೆಯಲು ಸಾಧ್ಯವಿಲ್ಲ. ಬೆಳೆದ ಗರ್ಭದ ಪತನವಾದರೆ ಹೆರಿಗೆಯಾದಂತೆಯೇ.

4. ಎಚ್ಚರ ತಪ್ಪಿ ಬಿದ್ದವರ ಪಕ್ಕ ‘ರೀ ಏಳ್ರೀ ಮಾತಾಡ್ರೀ’ ಅಂತೆಲ್ಲಾ ಹಲುಬುತ್ತ ಕುಳಿತುಕೊಳ್ಳುವುದರಿಂದ ಪ್ರಯೋಜನವಿಲ್ಲ. ತಕ್ಷಣ ಡಾಕ್ಟರನ್ನು ಕರೆಯಬೇಕು.

5. ಕುಡಿದು ಅಥವಾ ಬೆಲ್ಟು ಹಾಕಿಕೊಳ್ಳದೆ ಕಾನೂನಿಗೆ ವಿರುದ್ಧವಾಗಿ ಕಾರು ಚಲಾಯಿಸುವವರು ಧಾರಾವಾಹಿಯ ನಟರಾಗಿದ್ದರೆ ಮಾತ್ರ ಕೇಸಿಲ್ಲ. ನಾವು ‘ಕುಡಿದು ವಾಹನ ಚಲಾಯಿಸುವುದು ಶಿಕ್ಷಾರ್ಹ ಅಪರಾಧ’ ಎಂದು ಬೋರ್ಡು ಹಾಕಿಕೊಂಡು ಹೋಗುತ್ತಿದ್ದರೂ ನಮಗೆ ಶಿಕ್ಷೆಯಿಂದ ವಿನಾಯಿತಿ ಇಲ್ಲ.

-ಜಿ.ಮೃತ್ಯುಂಜಯ, ಬೆಂಗಳೂರು

## ಮಿಮಿಕ್ರಿ ಕಿಲಾಡಿಗಳು

ಹೊಸ ವರ್ಷದ ದಿನದಂದು ಝೀ ವಾಹಿನಿಯ ‘ಕಾಮಿಡಿ ಕಿಲಾಡಿಗಳು’ ಕಾರ್ಯಕ್ರಮದಲ್ಲಿ ಕಿಲಾಡಿಗಳು ನಕಲಿ ತೀರ್ಪುಗಾರರಾಗಿ ಅಸಲಿ ತೀರ್ಪುಗಾರರಿಗೆ ತಿರುಗೇಟು ನೀಡಿ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದರು. ಜ್ಯೂನಿಯರ್ ಯೋಗರಾಜ್ ಭಟ್, ರಕ್ಷಿತಾ, ಜಗ್ಗೇಶ್, ಆನಂದ್ ಆಗಿ ಗುರುವಿಗೇ ತಿರುಮಂತ್ರ ನೀಡಿದರು.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಏನಿದು ಬಿಗ್ ಬಾಸ್?

‘ಬಿಗ್ ಬಾಸ್’ ಕೊಡುಗೆ ಸಮಾಜಕ್ಕೆ ಏನು? ಎರಡು ತಿಂಗಳುಗಳಾದವು ಎಲ್ಲರನ್ನೂ ಒಂದು ಮನೆಯಲ್ಲಿ ಕೂಡಿ ಹಾಕಿ. ಅವರಿಂದ ಯಾರು ಏನು ಕಲಿಯಬೇಕಾಗಿದೆ? ಒಂದನೇ ಕ್ಲಾಸಿನ ಹುಡುಗರು ಹೇಗೆ ಇರುತ್ತಾರೆ ಹೇಗೆ ಜಗಳಾಡುತ್ತಾರೆ ಹೇಗೆ ವರ್ತಿಸುತ್ತಾರೆ ಇದೇ ಆಯಿತು. ಒಂದು ದಿನ ನೀರು ಇಲ್ಲಾ, ಇನ್ನೊಂದು ದಿನ ಸಿಲಿಂಡರ್ ಇಲ್ಲಾ. 25ನೇ ತಾರೀಖು ರಾತ್ರಿ ಕಂತಿನಲ್ಲಿ ಸಂಜನಾ ಹಾಗೂ ಸುದೀಪರ ಮಾತುಕತೆ ನೋಡಿ ಜನ ನಕ್ಕರು. ಸಂಜನಾಳ ಮತ್ತು ಅವಳ ತಾಯಿಯ ಜಟಾಪಟಿಯೇ ಆಯಿತು.

ಈ ಎಲ್ಲದರ ಬದಲಾಗಿ ಪ್ರತಿಯೊಬ್ಬರಲ್ಲೂ ಒಂದೊಂದು ಕಲೆ ಇರುತ್ತದೆ. ಅದನ್ನು ಜನರಿಗೆ ತಿಳಿಸಬಹುದು. ಬುದ್ಧಿಯನ್ನು ಹೆಚ್ಚಿಸುವ ಏನನ್ನಾದರೂ ತೋರಿಸಿ ಜನರ ಮನಸ್ಸನ್ನು ಗೆಲ್ಲುವಂತಾಗಬೇಕು.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಬೇರೆಯವರಿಗೂ ಅವಕಾಶ ಕೊಡಿ

ಕಲರ್ಸ್‌ನ ಧಾರಾವಾಹಿಗಳು ‘ಹಾವೂ ಸಾಯುವುದಿಲ್ಲ, ಕೋಲೂ ಮುರಿಯುವುದಿಲ್ಲ’ ಎಂಬ ಗಾದೆಗೆ ಒಳಪಟ್ಟಿವೆ ಎಂದರೆ ಅತಿಶಯೋಕ್ತಿ ಆಗಲಾರದು. ‘ಪುಟ್ಟ ಗೌರಿ ಮದುವೆ’ ಬರೀ ಸಸ್ಪೆನ್ಸ್‌ನಲ್ಲೇ ಹೋಗುತ್ತಿದೆ. ಸಾಗರಿ ಮತ್ತು ಧರ್ಮ ಇಬ್ಬರೂ ಮುಖ್ಯ ಕಥೆಗೆ ಕಂಟಕ ಪ್ರಾಯರಾಗಿದ್ದಾರೆ. ಜಗದೀಶನಿಗೆ ಶಿಕ್ಷೆ ಅತಿಯಾಯಿತು. ‘ಕುಲವಧು’ ಅಡುಗೂಲಜ್ಜಿ ಕಾಂಚನ, ನಿತಿನ್ ಇಬ್ಬರೂ ಖಳರು. ‘ಲಕ್ಷ್ಮಿ ಬಾರಮ್ಮ’ ಯಾವಾವಾಗಲೋ ಮುಗಿಯಬೇಕಾಗಿತ್ತು. ‘ಅಗ್ನಿ ಸಾಕ್ಷಿ’ಯಲ್ಲಿ ಸಿದ್ಧಾರ್ಥ ಸನ್ನಿಧಿಯನ್ನು ಪ್ರತಿ ಬಾರಿ ಎತ್ತಿಕೊಳ್ಳುತ್ತಾನೆ. ಆಕೆಯನ್ನು ಯಾವಾಗ ಕೆಳಗೆ ಬೀಳಿಸುತ್ತಾನೋ ಆಗ ಅಗ್ನಿ ಸಾಕ್ಷಿ ಮುಗಿದಂತೆ ಎನ್ನಬಹುದು. ‘ಕಿನ್ನರಿ’ ಬರೀ ಡೈಲಾಗ್‌ಗಳಲ್ಲೇ ಓಡ್ತಾ ಇದೆ. ಈ ಎಲ್ಲವನ್ನು ಬೇಗ ಮುಗಿಸಿ ಬೇರೆಯವರಿಗೆ ಅವಕಾಶಕೊಡಿ.

—ಶಿವಚರಣ್, ಟಿ.ನರಸೀಪುರ

## ಈ ಚಾನೆಲ್ ಹೀಗೇಕೆ ?

ಕನ್ನಡದ ಮೊದಲ ಖಾಸಗಿ ವಾಹಿನಿ ಎನ್ನುವ ಹೆಗ್ಗಳಿಕೆ ಹೊತ್ತುಕೊಂಡು, ಜನಪ್ರಿಯತೆಯಲ್ಲಿ ಮತ್ತು ವೀಕ್ಷಣೆಯಲ್ಲಿ ಬಹುಕಾಲ ಅಗ್ರಸ್ಥಾನದಲ್ಲಿದ್ದ ‘ಉದಯ’ ಇತ್ತೀಚೆಗೆ ಅಗ್ರ ಪಂಕ್ತಿಯಿಂದ ಜಾರುತ್ತಿರುವಂತೆ ಕಾಣುತ್ತಿದೆ. ವೀಕ್ಷಕರಿಗೆ ಸದಾ ಹೊಸ ಧಾರಾವಾಹಿಯನ್ನು ತೋರಿಸುತ್ತಿದ್ದ ವಾಹಿನಿ, ಇತ್ತೀಚೆಗೆ ಹಳೆಯ ಮೂರು ಧಾರಾವಾಹಿಗಳನ್ನು ಕಡತದಿಂದ ಹೊರತೆಗೆದು ಪ್ರಸಾರ ಮಾಡುತ್ತಿದೆ. ಇದು ವೀಕ್ಷಕರ ಕೋರಿಕೆಯೋ ಅಥವಾ ‘ಓಲ್ಡ್ ಈಸ್ ಗೋಲ್ಡ್’ ಎನ್ನುವಂತೆ, ಹಳೆಯದನ್ನು ಮೆಲುಕು ಹಾಕುವ ಹೊಸ ಆಯಾಮವೋ ತಿಳಿಯದು. ಹಾಗೆಯೇ ತಾಂತ್ರಿಕತೆಯಲ್ಲೂ ಈ ವಾಹಿನಿ ಇನ್ನಿತರ ವಾಹಿನಿಗಳಿಗಿಂತ ಹಿಂದೆ ಇರುವಂತೆ ಕಾಣುತ್ತದೆ. ಒಂದು ದೃಶ್ಯ ಮುಗಿಯುವ ಮೊದಲೇ ಧುತ್ತೆಂದು ಜಾಹೀರಾತು ವೀಕ್ಷಕರಿಗೆ ಕಿರಿಕಿರಿಯಾಗುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ನೋಡಿ ಸ್ವಾಮಿ, ನಾವಿರೋದೆ ಹೀಗೆ!

50ವರ್ಷಗಳ ಹಿಂದಿನ ಮಾತು. ಮನರಂಜನೆಗಾಗಿ ಚಲನಚಿತ್ರವನ್ನೇ ಅವಲಂಬಿಸಿದ್ದ ಕಾಲವದು. ಚಲನಚಿತ್ರವು ಒಳ್ಳೆಯ ಕಥೆ, ಸಂಭಾಷಣೆ, ಹಾಡುಗಳಿಂದ ಒಡಗೂಡಿದ್ದರೆ, ಆ ಚಿತ್ರವನ್ನು ಒಂದಲ್ಲ, ಹಲವು ಬಾರಿ ಜನ ನೋಡುತ್ತಿದ್ದರು. ಚಿತ್ರ ಕಳಪೆ ಗುಣಮಟ್ಟದ್ದಾಗಿದ್ದರೆ, ಊರಿನಲ್ಲಿ ಅಲ್ಲಲ್ಲಿ ಹಾಕಿರುತ್ತಿದ್ದ ಚಲನಚಿತ್ರದ ಭಿತ್ತಿಪತ್ರಕ್ಕೆ ಸೆಗಣಿ ಹೊಡೆದು, ಜನರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಜನಾಭಿಪ್ರಾಯಕ್ಕೆ ಮನ್ನಣೆ ನೀಡುತ್ತಾ,ಮರುದಿನವೇ ಚಲನಚಿತ್ರವನ್ನು ಬದಲಾಯಿಸುತ್ತಿದ್ದರು.

ನಾವಿಂದು ಟಿವಿ ವಾಹಿನಿಗಳು ಬಿತ್ತರಿಸುವ ಧಾರಾವಾಹಿಗಳನ್ನು ನೋಡುತ್ತಾ, ಮನೆಯಲ್ಲಿ ಕುಳಿತೇ ಮನರಂಜನೆಯನ್ನು ಪಡೆಯಬಹುದಾಗಿದೆ. ಆದರೆ, ಒಂದು ಮಾತಂತೂ ಖಚಿತ. ಯಾವುದೇ ಭಾಷೆಯ, ಯಾವುದೇ ವಾಹಿನಿಯು ಬಿತ್ತರಿಸುವ ಯಾವುದೇ ಧಾರಾವಾಹಿಯೂ ಏಕತಾನತೆಯಿಂದ ಒಡಗೂಡಿದ್ದು, ಅನೇಕ ವರ್ಷಗಳವರೆಗೆ ಮುಂದುವರೆಯುತ್ತಾ, ಮನಸ್ಸಿಗೆ ಮುದ ನೀಡುವ ಬದಲು ಜುಗುಪ್ಸೆಯನ್ನುಂಟು ಮಾಡುತ್ತವೆ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪತ್ರಿಕಾ ಮಾಧ್ಯಮದ ಮೊರೆ ಹೋಗಿದ್ದಾರೆ. ಹೀಗಿದ್ದೂ, ಸಾರ್ವಜನಿಕರ ಅಭಿಪ್ರಾಯಗಳಿಗೆ ಮಣೆ ಹಾಕದ ವಾಹಿನಿಯ ವ್ಯವಸ್ಥಾಪಕರು ‘ನೋಡಿ ಸ್ವಾಮಿ, ನಾವಿರೋದೆ ಹೀಗೆ’ ಎಂಬ ಹಟಮಾರಿ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾರೆ.

—ಉಡುಪಿ ಅನಂತೇಶ ರಾವ್, ಬೆಂಗಳೂರು